ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ ಸಿ3(4) ಪ್ರಾ.ಶಿ.ಉ.ವ್ಯಾ/ಬಿ.ಇಡಿ.ಅನುಮತಿ/2015-2016 ದಿ: 04.02.2015.

ಸುತ್ತೋಲೆ

*********

ವಿಷಯ: ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 2015-16 ನೇ ಸಾಲಿಗೆ ರೆಗ್ಯೂಲರ್ ಬಿ.ಇಡಿ. ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆಸಿ3(4) ಪ್ರಾಶಿ.ಉ.ವ್ಯಾ.ಅನು.44-2009-10 ದಿನಾಂಕ 15.12.2010.

***********

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಬಿ.ಇಡಿ/ಬಿ.ಪಿ.ಇಡಿ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಲು ಉಲ್ಲೇಖಿತ ಈ ಕಛೇರಿ ಸುತ್ತೋಲೆ ದಿನಾಂಕ 15.12.2010 ರಂತೆ, ಸುತ್ತೋಲೆಯಲ್ಲಿನ ಕ್ರ.ಸಂ. 12 ರಲ್ಲಿ ಸೂಚಿಸಿದ್ದಂತೆ ಬಿ.ಇಡಿ. ವ್ಯಾಸಂಗಕ್ಕಾಗಿ ನವೆಂಬರ್ 05 ಹಾಗೂ ಬಿ.ಪಿ.ಇಡಿ. ವ್ಯಾಸಂಗಕ್ಕಾಗಿ ಜುಲೈ-15 ರ ಒಳಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದರೂ ಸಹ ನಿಗಧಿತ ಅವಧಿ ಮೀರಿದ ನಂತರ ಅಂದರೆ ಡಿಸೆಂಬರ್ ತಿಂಗಳ ಅಂತ್ಯದವರೆವಿಗೂ ಉಪನಿರ್ದೇಶಕರಿಂದ ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದೆ.

ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಬಿ.ಇಡಿ. ಹಾಗೂ ಬಿ.ಪಿ.ಇಡಿ. ವ್ಯಾಸಂಗಕ್ಕಾಗಿ ಪ್ರಸ್ತಾವನೆಗಳನ್ನು ಜುಲೈ-30 ರ ಒಳಗೆ ಸಲ್ಲಿಸಲು ತಿಳಿಸಿದೆ. ಉಳಿದಂತೆ ಉಲ್ಲೇಖಿತ ಸುತ್ತೋಲೆಯಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸತಕ್ಕದ್ದು.

**ಅವಧಿಮೀರಿ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಪುರಸ್ಕರಿಸಲಾಗುವುದಿಲ್ಲ ಎಂದು ತಿಳಿಸಿದೆ. ಬಿ.ಇಡಿ ಹಾಗೂ ಬಿ.ಪಿ.ಇಡಿ ವ್ಯಾಸಂಗಕ್ಕಾಗಿ-ಜುಲೈ-30 ರ ನಂತರ ಬಂದ ಪ್ರಸ್ತಾವನೆಗಳನ್ನು ಯಾವುದೇ ಸೂಚನೆಗಳಿಲ್ಲದೆ ತಿರಸ್ಕರಿಸಲಾಗುವುದು.**

**ಗ್ರಾಮೀಣ ಪ್ರದೇಶದ ಶಾಲೆಗಳ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಹಾಗೂ ವಿದ್ಯಾರ್ಥಿ-ಶಿಕ್ಷಕರ ಅನುಪಾತವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಗಳನ್ನು ಶಿಫಾರಸ್ಸು ಮಾಡಲು ತಿಳಿಸಿದೆ.**

ಮೊಹಮ್ಮದ್ ಮೊಹಿಸಿನ್
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

4/2

ಪ್ರತಿಯನ್ನು

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
3. ಕ/ಪ್ರ.